ಯವರಿಗೆ ನಾವು ಆದೇಶ ಕೊಡುತ್ತೇವೆ. ನಾಗರೀಕ ಸಲಹಾ ಸಮಿತಿಯ ಮೀಟಿಂಗ್‌ಮಾಡುವಾಗ ಅಲ್ಲಿಯ ಕಾಪೊರೇಟರುಗಳನ್ನು ಕರೆಯಬೇಕೆಂದು ಹೇಳುತ್ತೇವೆ.

ಗುಳೇದಗುಡ್ಡ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದ ಕೇಂದ್ರಬಿಂಧುವಾದಂಥ ಗುಳೇಗುಡ್ಡದಲ್ಲಿ ಕುಡಿಯುವ ನೀರಿನ ಸಮಸ್ಯೆ ಅತೀ ಹೆಚ್ಚಾಗಿದ್ದು, ಬೋರ್‌ವೆಲ್‌ಗಳಲ್ಲೂ ಕೂಡ ನೀರಿನ ಪ್ರಮಾಣ ಕಡಿಮೆಯಾಗಿ ಕೆಳಗೆ ಹೋಗಿದೆ. ನೀರು ಬರುತ್ತಾ ಇಲ್ಲ. ಗವರ್ನಮೆಂಟಿನಿಂದ ಅಂದರೆ ಮುನಿಸಿಪಾಲಿಟಿಯಿಂದ ಈಗಾಗಲೇ ಟ್ಯಾಂಕರುಗಳಲ್ಲಿ, ಎಲ್ಲೆಲ್ಲಿ ನೀರಿನ ಸಮಸ್ಯೆ ಇದೆ, ಅಲ್ಲೆಲ್ಲಾ ನೀರನ್ನು ಹಂಚುವಂತಹ ಕೆಲಸವನ್ನು ಶುರು ಮಾಡಿದ್ದಾರೆ. ಮುಖ್ಯವಾಗಿ ಸಮಸ್ಯೆ ಇರತಕ್ಕಂತಾದ್ದು ಎಂದರೆ, ಮಲಪ್ರಭಾ ನದಿಯಿಂದ ನಾವು ಕುಡಿಯುವ ನೀರನ್ನು ಪಡೆಯುತ್ತಾ ಇದ್ದೆವು. ಆ ನದಿಯಲ್ಲಿ ನೀರು ಹರಿಯದೇ, ಸಂಪೂರ್ಣ ನಿಂತುಹೋಗಿ ಈಗ ಕುಡಿಯುವ ನೀರು ನಲ್ಲಿಯ ಮೂಲಕ ಬರದಂತೆ ಆಗಿದೆ. ಈಗಾಗಲೇ ಸಂಪೂರ್ಣವಾಗಿ ನಿಂತೇ ಹೋಗಿದೆ. ಒಂದು ದಿವಸ ಕೂಡ ಬರುತ್ತಾ ಇಲ್ಲ. ಆ ಕಾರಣಕ್ಕಾಗಿ ಮಲಪ್ರಭಾ ನದಿಯಿಂದ ಹಿಂದೆ ನಮಗೆ ಬಹಳಷ್ಟು ಸಮಸ್ಯೆಯಾದಾಗ ಕೆಲವು ಪ್ರಮಾಣದ ನೀರನ್ನು ಬಿಟ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನು ನದಿಯಲ್ಲಿ ಮಾಡಿಕೊಟ್ಟಿದ್ದಾರೆ. ಆ ಕಾರಣಕ್ಕೆ ಸನ್ಮಾನ್ಯ ನೀರಾವರಿ ಸಚಿವರನ್ನು ನೀರನ್ನು ಬಿಡಿಸಲಿಕ್ಕೆ, ಮಲಪ್ರಭಾ ನದಿಯ, ನವಿಲು ತೀರ್ಥ ಡ್ಯಾಮ್‌ನಿಂದ ನೀರನ್ನು ಬಿಡಲಿಕ್ಕೆ ತಮ್ಮ ಮೂಲಕ ಅವರಿಗೆ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) : ಅಧ್ಯಕ್ಷರೇ, ಅವರ ಸಲಹೆಯನ್ನು ಪರಿಶೀಲಿಸಲಾಗುವುದು.

ಶ್ರೀ ರಾಜಶೇಖರ ಶೀಲವಂತ : ಪರಿಶೀಲಿಸಲಾಗುವುದು ಎಂದು ಹೇಳುವುದಕ್ಕಿಂತ, ಇದು ಕುಡಿಯುವ ನೀರಿನ ಸಮಸ್ಯೆಯಾಗಿರುವುದರಿಂದ, ಮಾಡಿಯೇ ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು : ಅವರು ಪರಿಶೀಲನೆ ಎಂದು ಹೇಳಿದ ಮೇಲೆ, ಮಾಡುವುದೇ.

ಹೊಸಪೇಟೆ ಕ್ಷೇತ್ರದ ತುಂಗಭದ್ರ ಅಣೆಕಟ್ಟೆ ಕೆಳಗಡೆ ವಿಜಯನಗರದ ಕಾಲದ 8 ನೀರಾವರಿ ಕಾಲುವೆ ದುರಸ್ತಿ.

ಶ್ರೀ ಶಂಕರ ಗೌಡ (ಹೊಸಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ಹೊಸಪೇಟೆ ಮತಕ್ಷೇತ್ರದ ತುಂಗಭದ್ರಾ ಅಣೆಕಟ್ಟೆ ಕೆಳಗಡೆ ವಿಜಯನನಗರದ ಕಾಲದ ಸುಮಾರು 8 ನೀರಾವರಿ ಕಾಲುವೆಗಳ ಪರಿಸ್ಥಿತಿ ತೀರಾ ಹದಗೆಟ್ಟಿದ್ದು ನೀರಾವರಿಯಿಂದ ಬೆಳೆಗಳಿಗೆ ನೀರು ಸಾಲದೇ ಪ್ರತಿ ವರ್ಷ ಅಲ್ಲಿಯ ಬೆಳೆಗಳಲ್ಲಿ ಕುಂಠಿತವಾಗತಕ್ಕ ತೊಂದದರೆ ಅನುಭವಿಸುತ್ತಿದ್ದು ರೈತರು ಕಷ್ಟದಲ್ಲಿದ್ದಾರೆ. ಈ ಕಾಲುವೆಗಳು ಸುಮಾರು 450-500 ವರ್ಷಗಳ ಹಿಂದಿನ ಕಾಲುವೆಗಳು. ಇವುಗಳಿಗೆ ಮೂಲ ಎಂದರೆ, ಪ್ರತಿ ವರ್ಷ ಗಣಿಗಾರಿಕೆಯಿಂದ ಸುಮಾರು 3-4 ಅಡಿ ಹೂಳು ತುಂಬಿ ನೀರಿನ ಸಾಗಾಣಿಕೆಗೆ ಅಡಚಣೆ

ಉಂಟಾಗಿರುತ್ತದೆ. ಇದರಿಂದ ಈ ಕಾಲುವೆಗಳಲ್ಲಿ ಬಹಳ ಅನಾನುಕೂಲವಾಗಿ ಅಲ್ಲಿ ವಾಣಿಜ್ಯ ಬೆಳೆಗಳಾದಂಥ ಕಬ್ಬು, ಭತ್ತ, ಬಾಳೆ ಬೆಳೆಗಳು ಪ್ರತಿ ವರ್ಷ 60 ಟನ್ ಆಗುವಂತಾದ್ದು 30-40 ಟನ್‌ಗೆ ಇಳಿದು, ಇಳುವರಿ ಕಡಿಮೆಯಾಗಿರುವುದರಿಂದ ರೈತರು ಬಹಳ ಕಳವಳಕ್ಕೆ ಈಡಾಗಿದ್ದಾರೆ. ಕಾರಣ, ದಯವಿಟ್ಟು ಈ ದುರಸ್ತಿಗೆ ಸಂಬಂಧಪಟ್ಟ ಇಲಾಖೆಯವರಿಂದ ಒಂದು ರಿಪೋರ್ಟ್ ತಯಾರು ಮಾಡಿಕೊಟ್ಟಿದ್ದಾರೆ. ಅದನ್ನು ನಾನು ಮಂತ್ರಿಗಳಿಗೆ ಕೊಡುತ್ತಿದ್ದೇನೆ. ಅದರ ಪ್ರಕಾರ ಈ ಕಾಲುವೆಗಳ ದುರಸ್ತಿಗೆ ಕನಿಷ್ಟಪಕ್ಷ 50 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ತಜ್ಞರ ಸಮಿತಿಯವರು ವರದಿ ಕೊಟ್ಟಿರುತ್ತಾರೆ. ಅದರ ಪ್ರಕಾರ ನೀರಾವರಿ ಮಂತ್ರಿಗಳು ಕೂಡಲೇ ಕ್ರಮ ಕೈಗೊಂಡು ಅದಕ್ಕೆ ತಕ್ಕ ಬಂದೋಬಸ್ತ್ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅದಲ್ಲದೇ, ಈ ಅಣೆಕಟ್ಟು ಕೆಳಗೆ ಮೊದಲನೆಯದಾಗಿ ನೀರಾವರಿಗೆ ಅದ್ಯತೆ ಕೊಡಬೇಕೆಂಬ ವಿಚಾರ ಇರುವುದರಿಂದ ಇತ್ತೀಚೆಗೆ ಸರ್ಕಾರಗಳು ಕೆಲವು ಕಾರ್ಖಾನೆಗಳಿಗೆ ನೀರು ಒದಗಿಸುವುದರಿಂದ ವ್ಯವಸಾಯಕ್ಕೆ ಬಹಳ ತೊಂದರೆಯಾಗಿದೆ. ಸರ್ಕಾರದವರು ಈ ಕಾರ್ಖಾನೆಗಳಿಗೆ ನೀರು ಒದಗಿಸುವುದೇ ಆದಲ್ಲಿ ಮಳೆಗಾಲದಲ್ಲಿ ಜಲಾಶಯಗಳು ತುಂಬಿ ಭರ್ತಿಯಾದಾಗ ಕೊಡಲು ನಮ್ಮದೇನೂ ಅಡ್ಡಿಯಿಲ್ಲ. ಅದನ್ನು ಹೊರತುಪಡಿಸಿ ಬೇರೆ ವೇಳೆಯಲ್ಲಿ ಆ ಕಾರ್ಖಾನೆಗಳಿಗೆ ನೀರು ಕೊಡುವುದಾದಲ್ಲಿ ರೈತರಿಗೆ ಅನಾನುಕೂಲವಾಗುವುದರಿಂದ ಜನರು ಬೀದಿಗಿಳಿದು ಹೋರಾಟ ಮಾಡುವುದಕ್ಕೂ ತಯಾರಾಗಿದ್ದಾರೆ. ದಯಮಾಡಿ, ಮಾನ್ಯ ನೀರಾವರಿ ಮಂತ್ರಿಗಳು ಇದಕ್ಕೆ ಸಮಂಜಸವಾದ ಉತ್ತರವನ್ನು ನೀಡಬೇಕೆಂದು ತಮ್ಮ ಮುಖಾಂತರ ಈ ಸಭೆಯಲ್ಲಿ ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಖಾತೆ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಶಂಕರ ಗೌಡರು ಏನು ಹೇಳಿದ್ದಾರೆ, ಈ ವಿಜಯನಗರದ ಕಾಲುವೆಗಳು ಅರಸರ ಕಾಲದ ಕಾಲುವೆಗಳು. ಈ ಅರಸರ ಕಾಲುವೆಗಳಲ್ಲಿ ಸುಮಾರು 8 ಹಳೆಯ ಕಾಲುವೆಗಳು ಭರುತ್ತವೆ. 1989-90ರಿಂದ ಬಹಳಷ್ಟು ಸಾರಿ ಈ ನ್ಯಾಷನಲ್ ವಾಟರ್ ಮ್ಯಾನೇಜ್‌ಮೆಂಟ್ ಪ್ರಾಜೆಕ್ಟ್ ಒಳಗಡೆ ಮಾಡಬೇಕೆಂದು ಪ್ರಯತ್ನ ಮಾಡಿದ್ದಾರೆ. ಆದರೂ ಸಾಧ್ಯವಾಗಿಲ್ಲ. ಅವರು ಹೇಳತಕ್ಕಂಥ ಮಾತು, ಆ ಕಾಲುವೆಯ ಮೂಲ ಸ್ವರೂಪವನ್ನೇ ಕಳೆದುಕೊಂಡಿವೆ. ಅದರಿಂದ ಸುಮೂರು 12-13 ಸಾವಿರ ಎಕರೆಗೆ ನೀರು ಕೊಡಬೇಕಾಗಿದೆ.

ಅದಕ್ಕೆ 50 ಕೋಟಿಗಳ ಅವಶ್ಯಕತೇನೂ ಇಲ್ಲ. ವಿಜಯನಗರ ಕಾಲುವೆಗಳ ಆಧುನೀಕರಣಕ್ಕೆ ಸುಮಾರು 16.64 ಕೋಟಿಗಳ ಪ್ರಾಜೆಕ್ಟನ್ನು ಮಾಡಿ ವಾಟರ್ ರಿಸೋರ್ಸ್ ರಿಕನ್‌ಸಾಲಿಡೇಷನ್ ಪ್ರಾಜೆಕ್ಟ್ ತೆಗೆದುಕೊಂಡಿದ್ದೇವೆ. ವಿಶ್ವಬ್ಯಾಂಕಿನಿಂದ ನೆರವು ಕೇಳುವುದಕ್ಕೆ ಎಲ್ಲಾ ಪ್ರೋಸೆಸ್ ಮಾಡುತ್ತಿದ್ದೇವೆ.

ಶ್ರೀ ಶಂಕರಗೌಡ ಪಾಟೀಲ : ಈ ಯೋಜನೆ ಮಾಡುವುದರೊಳಗೆ ರೈತರು ಅಲ್ಲಿ ಉಳಿಯುವ ಸಂದರ್ಭ ಇಲ್ಲ. ಕಾರಣ ಕೆಲಮಟ್ಟಿಗಾದರೂ ಹಣ ಬಿಡುಗಡೆ ಮಾಡಿ ಹೂಳು ತೆಗೆಯುವುದು, ಮೋರಿ ರಿಪೇರಿ ಮಾಡುವುದು, ಇಂತಹ ಕೆಲಸಗಳಿಗಾದರೂ ಕನಿಷ್ಟ 10 ಕೋಟಿ ಖರ್ಚುಮಾಡಿ ಶೀಘ್ರವಾಗಿ ರಿಪೇರಿ ಕ್ರಮ ತೆಗದುಕೊಳ್ಳಬೇಕೆಂದು ವಿನಂತಿ.

ಶ್ರೀ ಕೆ.ಎನ್. ನಾಗೇಗೌಡ : ಕಳೆದ ಐದು ವರ್ಷದಿಂದ ಖರ್ಚು ಮಾಡಿರುವುದೇ ಎರಡೂವರೆ ಕೋಟಿ ಹಣ, ಈ ಸಲ 50ಲಕ್ಷ ಮಾತ್ರ ಇಟ್ಟಿದ್ದೇವೆ, ಇನ್ನೂ ಒಂದು ಕೋಟಿ ರೂ.ಗಳ ಪ್ರಾಜೆಕ್ಟ್ ಮಾಡಿ ಕ್ರಿಟಿಕಲ್ ಎಮರ್ಜೆನ್ಸಿ ವರ್ಕ್ಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮೈಸೂರು ನಗರ ಸಿದ್ಧಾರ್ಥ ಬಡಾವಣೆಯಲ್ಲಿ ಕುಡಿಯುವ ನೀರಿನಲ್ಲಿ ಕಲ್ಮಶ

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಅಧ್ಯಕ್ಷರೇ, ಮೈಸೂರುನಗರದಲ್ಲಿ ನೀರಿನ ಸಮಸ್ಯೆ ಬಹಳಷ್ಟಿದೆ. ಅದರ ಮೂರ್ನಾಲ್ಕು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮೈಸೂರಿನ ಸಿದ್ಧಾರ್ಥ ಬಡಾವಣೆಯಲ್ಲಿ ನಲ್ಲಿಯಲ್ಲಿ ಕೆಲವು ಭಾಗದಲ್ಲಿ ಬರುವ ನೀರನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ ನಾನೇ ಆ ಬಡಾವಣೆಗೆ ಹೋಗಿ ಹಿಡಿದುಕೊಂಡು ಬಂದಿದ್ದೇನೆ. ಇಂತಹ ನೀರು ನಲ್ಲಿಗಳಲ್ಲಿ ಬರುತ್ತಿದೆ. ನೋಡಿ ಸೇಂದಿ ಇದ್ದಹಾಗಿದೆ ನೀರು. ಇದನ್ನು ದಯಮಾಡಿ ತಕ್ಷಣ ಸರಿಮಾಡುವ ವ್ಯವಸ್ಥೆ ಮಾಡುತ್ತೇನೆ. ಮತ್ತೊಂದು ಅಂಶ, ಆಯುರ್ವೇದ ಕಾಲೇಜಿನಿಂದ ತಿಲಕನಗರಕ್ಕೆ, ಅಲ್ಲಿ ದರ್ಜಿಬೀದಿ ಇದೆ, ಮುಖ್ಯವಾದ ಕೆಲವು ರಸ್ತೆಗಳಲ್ಲಿ ಬಹಳ ವರ್ಷಗಳಿಂದಲೂ ನೀರಿನ ಸಮಸ್ಯೆ ಇದೆ. ಅಲ್ಲಿಗೆ 1200 ಮೀಟರ್ ಪೈಪ್‌ಅಳವಡಿಸುವ ಅಂದಾಜು ಆಗಿದೆ. ಕಾಮಗಾರಿ ಕೆಲಸ ಬಹಳ ನಿಧಾನವಾಗಿದೆ. ತಕ್ಷಣ ಕೆಲಸ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ. ಮತ್ತೊಂದು ಪ್ರಮುಖ ಅಂಶ ಎಂದರೆ ಗಾಂಧಿನಗರ ಪರಿಶಿಷ್ಟ ವರ್ಗದ ಜನ ವಾಸ ಮಾಡುವ ಸ್ಥಳ. ಅಲ್ಲಿ ಭಾಗ್ಯಜಲಕ್ಕೆ ನಾನು ಎಲ್ಲಾ ದಾಖಲೆಗಳನ್ನು ಕೊಟ್ಟು 4 ಪರಿಶಿಷ್ಟ ವರ್ಗದ ಮನೆಗಳಿಗೆ ಭಾಗ್ಯಜಲ ಕೊಡಿಸುವ ವ್ಯವಸ್ಥೆಯನ್ನು ನಗರ ಪಾಲಿಕೆಯಿಂದ ಮಾಡಿಸಿದ್ದೇನೆ. ಯಾವ ಅಧಿಕಾರಿಗಳು ಭಾಗ್ಯಜಲ ಕೊಟ್ಟಿದ್ದರೋ ಅವರೇ ಸ್ಥಳೀಯ ನಗರಪಾಲಿಕೆ ಸದಸ್ಯನ ಒತ್ತಡದಿಂದ ನನಗೆ ಕೇಳದೆ ಇಲ್ಲಿ ಭಾಗ್ಯಜಲ ಹೇಗೆ ಹಾಕಿದ್ದೀರೆಂಬ ಒತ್ತಾಯದ ಮೇಲೆ ಅದನ್ನು ಕೀಳಲಿಕ್ಕೆ ಹೋಗಿದ್ದಾರೆ. ಮೈಸೂರು ನಗರದಲ್ಲಿ 15 ಸಾವಿರ ಇಲೀಗಲ್ ನೀರಿನ ಕನೆಕ್ಷನ್ಸ್ ಇವೆ. ಅದನ್ನು ಕೀಳಲಿಕ್ಕೆ ಹೋಗಿಲ್ಲ. ಹೀಗಾದರೆ ಶಾಸಕರಿಗೆ ರಕ್ಷಣೆ ಏನು? ನಾವು ಹೇಗೆ ಕೆಲಸ ಮಾಡುವುದು? ಎಲ್ಲಾ ದಾಖಲೆಗಳೂ ಇಲ್ಲಿವೆ? ಸರ್ಕಾರ ಸರಿಯಾದ ರೀತಿ ಉತ್ತರ ಕೊಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಅವೆಲ್ಲಾ ಸಮಸ್ಯೆಗಳು ಇದ್ದರೇನೇ ಜನ ನಮ್ಮ ಮಾತು ಕೇಳುವುದು. ನಿಮ್ಮ ಬಳಿ ಇರುವ ದಾಖಲೆಗಳನ್ನೆಲ್ಲಾ ಅವರಿಗೆ ಕಳಿಸಿಕೊಡಿ.

ಶ್ರೀ ಎಂ.ಸಿ. ನಾಣಯ್ಯ : ಅಧ್ಯಕ್ಷರೇ, ಅವರ ಕ್ಷೇತ್ರ ಕುಡಿಯುವ ನೀರಿನ ಬಗ್ಗೆ ವಿಚಾರ ಎತ್ತಿದ್ದಾರೆ. ಸರ್ಕಾರ ಇದಕ್ಕೆ ಗಮನಹರಿಸುತ್ತದೆ. ನಾನು ಅವರಿಗೆ ಕೇಳಿಕೊಳ್ಳುತ್ತಿದ್ದೇನೆ, ದಯವಿಟ್ಟು ನಿಮ್ಮ ಬಳಿ ಇರುವ ಮಾಹಿತಿಗಳನ್ನು ಕಳುಹಿಸಿ ನಾವು ಅದರ ಬಗ್ಗೆ ಕ್ರಮ ಕೈಗೊಂಡು ಸರ್ಕಾರದ ವತಿಯಿಂದ ಏನು ಮಾಡಬೇಕಾಗಿದೆಯೋ ಅದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

10 ವರ್ಷದ ಕೆಳಗಿನ ಮಕ್ಕಳನ್ನು ದುಡಿಮೆಗೆ ಉಪಯೋಗಿಸಬಾರದೆಂದು ಹೈಕೋರ್ಟಿನಲ್ಲಿ ತೀರ್ಪು ನೀಡಿರುವುದು

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಅಧ್ಯಕ್ಷರೇ, ಹೈಕೋರ್ಟಿನಲ್ಲಿ ಒಂದು